# ನಿಷ್ಕಲ್ಮಶ ಪ್ರೀತಿಯ ಹಂಬಲದಲ್ಲಿ...



ರೂಢಿಗೆ ವಿರುದ್ಧವಾದ ಮಾನವ ಸಂಬಂಧಗಳನ್ನು ಭರಿಸುವುದು ಯಾವಾಗಲೂ ಸಂಕಟದ ಮೊತ್ತವೇ ಆಗಿರುತ್ತದೆ. ಅಂಥ ಒಂದು ಸಂಬಂಧವನ್ನು ಒಂದು ವಿಚಿತ್ರವಾದ ಪರಿಸರದಲ್ಲಿಟ್ಟು ಪರೀಕ್ಷಿಸುವ ಕೆಲಸವನ್ನು 'ಆಟೊಮಿಕ್ ಲವ್' ಕಿರುಚಿತ್ರ ಮಾಡುತ್ತದೆ.

■ ಗೌರಿ

ಇದು ಡೇಟಿಂಗ್ ಆ್ಯಪ್‌ಗಳ ಜಮಾನ. ಟಿಂಡರ್ ಸೇರಿದಂತೆ ಸಾಕಷ್ಟು ಆ್ಯಪ್‌ಗಳು ಇಂದು ಡೇಟಿಂಗ್ ಕಾರಣಕ್ಕೆ ಜನಪ್ರಿಯಗೊಂಡಿವೆ. ಆದರೆ ಈ ಆ್ಯಪ್‌ಗಳು ಬರುವುದಕ್ಕೂ ಮುನ್ನವೇ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಲು 80ರ ದಶಕದಲ್ಲಿ ವಿಡಿಯೊಗಳನ್ನು ಮಾಡಿ ಆನ್‌ಲೈನ್‌ನಲ್ಲಿ ಹರಿಬಿಡುತ್ತಿದ್ದರು. ಹೀಗೆ ಸಂಗಾತಿಯನ್ನು ಹುಡುಕಿಕೊಳ್ಳುವ ವಿಡಿಯೊ ಮಾಡುವ ಪ್ರಕ್ರಿಯೆಯನ್ನೇ ಒಂದು ಕಿರುಚಿತ್ರವನ್ನಾಗಿಸಿದ್ದಾರೆ ಇಮೋಜೆನ್ ಮೆಕ್‌ಲುಸ್ಕೇ.

ಡಾನಾ ಮತ್ತು ಅಲೀನಾ ಇಬ್ಬರು ಸ್ನೇಹಿತೆಯರು. ಡಾನಾಗೆ ಇತ್ತೀಚೆಗಷ್ಟೇ ವಿವಾಹವಾಗಿದೆ. ಆದರೆ ಅಲೀನಾಗೆ ಮದುವೆಯಾಗಿಲ್ಲ. ತನ್ನ ಗೆಳತಿಯರಿಗೆಲ್ಲ ಮದುವೆಯಾಗಿದೆ. ತನಗಿನ್ನೂ ಸಂಗಾತಿ ಸಿಕ್ಕಿಲ್ಲ ಎಂಬ ಹತಾಶೆಯಲ್ಲಿ ಅವಳಿದ್ದಾಳೆ. ತನ್ನ ಗೆಳತಿಗೆ ಸಹಾಯ ಮಾಡಲು ಡಾನಾ, ಅಲೀನಾಳ ವಿಡಿಯೊ ಮಾಡಲು ತೊಡಗಿದ್ದಾಳೆ.

ಕ್ಯಾಮೆರಾ ಎದುರಿಗೆ ಕೂತು ತನ್ನ ಬಗ್ಗೆ, ತನ್ನ ಹವ್ಯಾಸಗಳ ಬಗ್ಗೆ, ತನ್ನ ಸಂಗಾತಿಯಾಗುವ ಹುಡುಗ ಹೇಗಿರಬೇಕು ಎಂಬ ಬಗ್ಗೆಯೆಲ್ಲ ಅಲೀನಾ ಮಾತಾಡಬೇಕಾಗಿದೆ. ಆದರೆ ಅವಳಿಗೆ ಅದನ್ನು ಸಹಜವಾಗಿ ಮಾಡಲು ಸಾಧ್ಯವಾಗುತ್ತಿಲ್ಲ. ಪುರುಷರನ್ನು ಆಕರ್ಷಿಸಲು ಮಾತಿನ ಧಾಟಿಯಲ್ಲಿರಬೇಕಾದ ಏರಿಳಿತ, ಕೈಯ ಚಲನೆ, ಕಣ್ಣಿನ ಕುಡಿನೋಟ, ಮೈಮಾಟವನ್ನು ಎದ್ದು ಕಾಣಿಸುವ ಹಾಗೆ ಮಾಡುವ ಆಟ – ಇವ್ಯಾವುವೂ ಅಲೀನಾಗೆ ಸಹಜವಾಗಿ ಮಾಡಲು ಸಾಧ್ಯವಾಗುತ್ತಿಲ್ಲ. ಕ್ಯಾಮೆರಾ ಹಿಂದೆ ನಿಂತ ಡಾನಾ ಪ್ರಶ್ನೆಗಳನ್ನು ಕೇಳುತ್ತಾ ಹೋದರೆ ಅಲೀನಾ ಉತ್ತರಿಸಲು ಎಡವುತ್ತಲೇ ಹೋಗುತ್ತಾಳೆ.

ಕೊನೆಗೆ ಡಾನಾ ತಾನೇ ಬಂದು ಕೂತು ಮಾಡಿತೋರಿಸುತ್ತಾಳೆ. ಆದರೆ ಮತ್ತೆ ಪ್ರಯತ್ನಿಸುವ ಅಲೀನಾ, ಅವಳ ಕುಟುಂಬದ ಬಗೆಗೆ ವಿವರಣೆ ನೀಡುತ್ತ ಭಾವುಕಳಾಗಿಬಿಡುತ್ತಾಳೆ. ಸಿಂಗಲ್ ಪೇರೆಂಟ್ ಆಗಿ ತನ್ನ ಸಾಕಿದ ತಾಯಿ, ಮನೆಯ ಪರಿಸ್ಥಿತಿ ಎಲ್ಲವೂ ಹೇಳುತ್ತ ಧ್ವನಿ ಗದ್ಗದಿತವಾಗಿಬಿಡುತ್ತದೆ. ಕಾಮದ ಪ್ರಭಾವಲಯದಲ್ಲಿ ಭಾವುಕತೆಗೆ ಸ್ಥಾನವೆಲ್ಲಿ?ಈ ವಿಡಿಯೊ ಒಂದು ನೆಪವಾಗಿ ಅವರಿಬ್ಬರ ಹಿಂದಿನ ಸಂಬಂಧವೂ ಮಾತಿನಲ್ಲಿ ಸುಳಿದುಹೋಗುತ್ತದೆ. ಆ ಇಬ್ಬರೂ ಮೊದಲು ಸಲಿಂಗಿಗಳಾಗಿದ್ದರು ಎಂಬ ಸೂಚನೆಯೂ ಬರುತ್ತದೆ. ತನ್ನ ಜೊತೆಗೆ ಪ್ರೇಮದಲ್ಲಿದ್ದ ಗೆಳತಿ ಮತ್ತೊಬ್ಬನನ್ನು ಮದುವೆಯಾಗಿದ್ದೇ ಅಲೀನಾಳಿಗೆ ತಡೆಯಲಾರದ ಆಘಾತ. ಅದನ್ನು ಮುಚ್ಚಿಟ್ಟುಕೊಳ್ಳಲಾಗದೆ ಹೆಣಗುತ್ತಿದ್ದಾಳೆ. ಈಗ ಅವಳು ತಾಯಿಯಾಗುವ ಸಿದ್ಧತೆಯಲ್ಲಿದ್ದಾಳೆ ಎಂಬ ಸಂಗತಿಯೂ ಹೊರಬರುತ್ತದೆ.



ಹೆಸರು: ಆಟೊಮಿಕ್ ಲವ್  
ನಿರ್ಮಾಣ: ಯಿಂಗ್ನಾ ಲು  
ನಿರ್ದೇಶನ, ಸಂಕಲನ: ಇಮೋಜೆನ್ ಮೆಕ್‌ಲುಸ್ಕೇ  
ಛಾಯಾಗ್ರಹಣ: ಲುಕ್ಕಾ ಬಾರೊನ್, ಪೀಟರ್ಸ್  
ತಾರಾಗಣ: ಮ್ಯಾಡಿ ಮೆಕ್‌ವಿಲಿಯಮ್, ಪ್ರಿಸ್ಸಿಲ್ಲಾ ಡೌತಿ

ತನ್ನ ಜೊತೆಗೆ ದೇಹವನ್ನೂ ಪ್ರೇಮವನ್ನೂ ಹಂಚಿಕೊಂಡ ಜೀವವೊಂದು ಬಿಡಿಸಿಕೊಂಡು ಹೋಗಿ ಲೋಕರೂಢಿಯ ಸಂಸಾರವನ್ನು ಕಟ್ಟಿಕೊಂಡು ಸುಖವಾಗಿರುವುದು ಅಲೀನಾಳು ತತ್ತರಿಸುವಂತೆ ಮಾಡಿದೆ. ತಾನೂ ಹಾಗೆಯೇ ಯಾರನ್ನಾದರೂ ಮದುವೆಯಾಗಿ ತೋರಿಸಬೇಕು ಎಂದರೆ ಹುಡುಗ ಸಿಗುತ್ತಿಲ್ಲ.ಸಂಗಾತಿಯನ್ನು ಬಯಸಿ ಮಾಡಿದ ಒಂದು ವಿಡಿಯೊ ನೋಡಿಯೇ ನಿರ್ದೇಶಕಿಗೆ ಈ ಕಿರುಚಿತ್ರ ಮಾಡಲು ಸ್ಫೂರ್ತಿ ದೊರಕಿದ್ದಂತೆ. ನಾವು ನೋಡುವ ಮಾದಕ, ಉತ್ಸಾಹಭರಿತ, ಆಕರ್ಷಕ ವ್ಯಕ್ತಿಗಳ ಹಿಂದೆ ಎಂಥ ನೋವಿನ, ಕೊರಗಿನ ಜಗತ್ತೊಂದು ಅವಿತಿರಬಹುದು ಎಂಬುದನ್ನು ಎಂಬುದನ್ನು ಈ ಕಿರುಚಿತ್ರ ತೋರಿಸುತ್ತದೆ.

ಸ್ಥಿರವಾದ ಒಂದು ಫ್ರೇಮ್‌ನಲ್ಲಿ, ಇಬ್ಬರ ಸಂಭಾಷಣೆಯಲ್ಲಿಯೇ ಕಿರುಚಿತ್ರ ಮುಗಿದುಹೋಗುತ್ತದೆ. ಹಾಗಾಗಿ ಎಂಬತ್ತರ ದಶಕವನ್ನು ಕಟ್ಟಿಕೊಡಲು ನಿರ್ದೇಶಕಿ ತುಂಬಾ ಪ್ರಯಾಸವನ್ನೇನೂ ಪಡಬೇಕಾಗಿ ಬಂದಿಲ್ಲ. ಎರಡು ಪಾತ್ರಗಳ ಲುಕ್ ಅನ್ನು ಮಾತ್ರವೇ ಆ ಕಾಲಕ್ಕೆ ಹೊಂದಿಸಲಾಗಿದೆ. ಚಲಿಸದೇ ಇರುವ ಕ್ಯಾಮೆರಾ ಕೂಡ ಒಟ್ಟಾರೆ ಕಥನಕ್ಕೊಂದು ತಾತ್ವಿಕ ಚೌಕಟ್ಟನ್ನು ಕೊಟ್ಟಿದೆ ಎನ್ನಬಹುದು. ಕಿರುಚಿತ್ರದಲ್ಲಿ ಕಂಟೆಂಟ್ ಎನ್ನುವುದನ್ನು ಗಟ್ಟಿಗೊಳಿಸಿದರೆ ಉಳಿದ ತಾಂತ್ರಿಕತೆಗಳೆಲ್ಲವೂ ಸರಳವಾಗಿದ್ದರೂ ಮನಸ್ಸಿಗೆ ತಟ್ಟುತ್ತದೆ ಎಂಬುದಕ್ಕೆ ಉದಾಹರಣೆಯಾಗಿಯೂ ಈ ಕಿರುಚಿತ್ರವನ್ನು ನೋಡಬಹುದು.

ಈ ಕಿರುಚಿತ್ರ ವೀಕ್ಷಣೆಗೆ https://bit.ly/3EeUzFA ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.